ಆ ಆಕೃತಿಯು ಬದಿಗೆ ಸರಿಯಲಾರಂಭಿಸಿತು. ತೋಳ, ಹೌದು ಅದು ತೋಳವಾಗಿತ್ತು. ಅದು ರಸೂಲನ ಎಷ್ಟೋ ಸಮಯವನ್ನು ವಿನಾಕಾರಣ ಹಾಳು ಮಾಡಿತ್ತು.

ಅವನು ಸನಿಕೆಯನ್ನು ಕೆಳಗಿಟ್ಟು, ಕಲ್ಲೊಂದನ್ನು ಎತ್ತಿಕೊಂಡು ತೋಳದತ್ತ ಬೀಸಿ ಒಗೆದ. ಹೊಡೆತ ತಿಂದ ತೋಳ ಜೋರಾಗಿ ಕಿರುಚುತ್ತ ಬೇಲಿ ದಾಟಿ ಬೆಟ್ಟದ ಕಡೆಗೆ ಓಡಿತು.

ದೃಢ ನಿರ್ಧಾರ ಮಾಡಿ ರಸೂಲ ಮತ್ತೆ ಗೋರಿ ತೋಡಲು ಶುರು ಮಾಡಿದ. ಅತ್ಯಂತ ವೇಗದಲ್ಲಿ ಅವನು ಮಣ್ಣು ಮೇಲೆತ್ತಿ ಒಗೆಯಲಾರಂಭಿಸಿದ. ಮಣ್ಣು ಹುಲ್ಲಿನ ಮೇಲೆ ಬಿದ್ದು ಮತ್ತೆ ಮೊದಲಿನಂತೆ ಸದ್ದಾಗಲಾರಂಭಿಸಿತು.

ಈಗ ಮೊಣಕಾಲವರೆಗಿನ ಮಣ್ಣು ತೋಡಿಯಾಗಿತ್ತು. ಉದುರು ಉದುರಾದ ಬೂಸಾದಂತಹ ಮಣ್ಣು. ಹೂಳುವಾಗ ಜನರು ಹೆಚ್ಚು ಕಾಳಜಿ ವಹಿಸಿದಂತೆ ಕಾಣಲಿಲ್ಲ. ಕಾಲಿನಿಂದ ಸರಿಯಾಗಿ ತುಳಿದಿರಲಿಲ್ಲ. ಹೀಗಾಗಿ ಮಣ್ಣಿನ ಕೆಳ ಭಾಗವೆಲ್ಲ ಪೊಳ್ಳಾಗಿಯೇ ಇತ್ತು. ಅದರಿಂದ ರಸೂಲ ಹೆಚ್ಚು ಶ್ರಮಪಡಬೇಕಾಗಿ ಬರಲಿಲ್ಲ.

ಒಮ್ಮೊಮ್ಮೆ ಅವನು ತುಂಬ ಶ್ರಮಪಡಬೇಕಾಗಿ ಬರುತ್ತಿತ್ತು. ದಣಿದು ಹೈರಾಣಾಗಿ ಬಿಡುತ್ತಿದ್ದ. ಕೆಲವೊಮ್ಮೆ ಗೋರಿಯ ಮಣ್ಣು ಗಟ್ಟಿಯಾಗಿ ತುಳಿದಂತಿರುತ್ತಿತ್ತು, ಇಲ್ಲವೇ ಮಣ್ಣು ಹೆಚ್ಚು ಜಿಗುಟು ಜಿಗುಟಾಗಿರುತ್ತಿತ್ತು. ಮಳೆಗಾಲದಲ್ಲಂತೂ ಕೇಳುವುದೇ ಬೇಡ. ಮಣ್ಣೆಲ್ಲ ಒದ್ದೆಯಾಗಿ ರಾಡಿ ಕೆಸರಿನಂತಾಗಿ ಬಿಡುತ್ತಿತ್ತು. ಗಾಢ ಕಗ್ಗತ್ತಲೆ. ರಾತ್ರಿ ಕೀಟಗಳ ಕರ್ರ್ ಸದ್ದು ಕೇಳಿ ಅವನು ಭಯ ಪಡುತ್ತಿದ್ದ. ಮಸಣದ ಆ ಕಗ್ಗತ್ತಲೆ ರಾತ್ರಿಯ ಭಯಾನಕತೆಯು ಅವನನ್ನು ಕಂಗಾಲುಗೊಳಿಸಿ ಬಿಡುತ್ತಿತ್ತು. ಇದು ಹಿಂದೊಮ್ಮೆ ಅವನು ಮರಳಿ ಹೋಗುವಂತೆ ಮಾಡಿತ್ತು. ಕೆಲವೊಮ್ಮೆ ಅವನು ಗೋರಿ ತೋಡಲು ಶುರು ಮಾಡಿದ್ದೇ ತಡ ರಪ್ ರಪ್ ಎಂದು ಮಳೆ ಶುರುವಾಗಿ ಬಿಡುತ್ತಿತ್ತು. ಅರ್ಧ ತೋಡಿದ ಗೋರಿಯೊಳಗೇ ಮೊಣಕಾಲವರೆಗೆ ನೀರು ತುಂಬಿಕೊಳ್ಳುತ್ತಿತ್ತು. ಆಗಿನ ಪರಿಶ್ರಮವೆಲ್ಲ ವ್ಯರ್ಥವಾಗಿ ಬಿಡುತ್ತಿತ್ತು. ಮತ್ತೆ ಮಣ್ಣನ್ನು ಗೋರಿಗೆ ದೂಡಿ ಹಾಗೇ ಮರಳಬೇಕಾಗುತ್ತಿತ್ತು.

ತೊಡೆಯವರೆಗೆ ತೋಡಿಯಾದ ಬಳಿಕ ರಸೂಲ ಕೆಲಸ ನಿಲ್ಲಿಸಿದ ಮತ್ತು ಗೋರಿಯ ಬದಿಗೆ ಕುಳಿತ. ರಾತ್ರಿಯ ತಂಪಿನಲ್ಲೂ ಶ್ರಮದಿಂದ ಅವನ ಮೈ ಬೆವರ ತೊಡಗಿತ್ತು. ಕೈಯಿಂದಲೇ ಹಣೆಯ ಬೆವರು ಒರೆಸಿದ. ಜಾಗರೂಕತೆಯಿಂದ ಸುತ್ತಮುತ್ತ ಕಣ್ಣಾಡಿಸಿದ. ತಲೆಯೆತ್ತಿ ಆಗಸದ ತಾರಾ ಮಂಡಲವನ್ನು ನೋಡಿದ. ವಾತಾವರಣದಲ್ಲಿ ಮುಸುಕಿರುವ ಮಂಜಿನ ಅರಿವು ಅವನಿಗಾಗ ತೊಡಗಿತು. ಗೋರಿ ತೋಡುವ ಕೆಲಸ ಈಗ ಮುಗಿದಿತ್ತು. ರಾತ್ರಿಯೂ ಇನ್ನು ಸಾಕಷ್ಟು ಉಳಿದಿತ್ತು. ಈಗಷ್ಟೇ ಮಧ್ಯ ರಾತ್ರಿ ದಾಟಿತ್ತು. ಸನಿಹದಲ್ಲಿರುವ ರಸ್ತೆಯಲ್ಲಿ ಈಗೀಗ ಚಕ್ಕಡಿಗಳು ಹಾದು ಹೋಗ ತೊಡಗಿದ್ದವು. ಅದರ ಲಯಬದ್ಧ ಸದ್ದಿಗೆ ವಾತಾವರಣ ಮತ್ತಷ್ಟು ಭಯಾನಕಗೊಳ್ಳುತ್ತಿತ್ತು. ಅವನು ಕೆಲಕ್ಷಣ ಹಿಂದಕ್ಕೆ ಉರುಳಿಕೊಂಡ. ಎದುರಿನ ದೂರದ ಬೆಟ್ಟವನ್ನು ದಿಟ್ಟಿಸಲಾರಂಭಿಸಿದ.

...ಹೀಗೇ ಅವನು ಹಿಂದೊಮ್ಮೆ ಕುಳಿತಿದ್ದಾಗ ಬೆಳಕು ಮೂಡಿ ಬಿಟ್ಟಿತ್ತು. ಅವನು ಮಣ್ಣಾದ ಹೆಣದ ಬಟ್ಟೆಯನ್ನು ಮನೆಗೆ ಹೋಗಿ ತೊಳೆದ. ಅವನು ಸಂಜೆಗೆ ಆ ಹೆಣದ ಬಟ್ಟೆಯನ್ನು ಮಾರವಾಡಿಯ ಬಳಿಗೆ ಒಯ್ದ. ಅವನು ಹೆಚ್ಚು ಮಾತಾಡದೆ, ಬಟ್ಟೆಯನ್ನು ಪಡೆದು ಅವನ ಕೈ ಮೇಲೆ ಇಪ್ಪತ್ತೈದು ರೂಪಾಯಿ ಇಟ್ಟಿದ್ದ.

'ಬೇಡ, ಇಷ್ಟು ಕಡಿಮೆ! ಇಷ್ಟೆಲ್ಲ ಶ್ರಮ ಪಟ್ಟಿದ್ದಕ್ಕೆ ಬರೇ ಇಪ್ಪತ್ತೈದೇ?' ಎಂದು ರಸೂಲ ಅಸಹಾಯಕತೆಯಿಂದ ಕೇಳಿದ್ದ.

ಆಗ ಮಾರವಾಡಿ ಮತ್ತೊಂದು ಹತ್ತರ ನೋಟು ನೀಡಿದ. ಅವನು ಉಪಾಯವಿಲ್ಲದೆ ಆ ಹಣವನ್ನು ಕಿಸೆಗೆ ತುರುಕಿ ಹೊರಟು ಬಂದಿದ್ದ. ಹಲವಾರು ಕಿರಿಕಿರಿ ಅವನು ನಿಭಾಯಿಸ ಬೇಕಿತ್ತು...